National

Kannada

16.03.2025: 13.10hrs

**ಆಕಾಶವಾಣಿ, ಬೆಂಗಳೂರು**

**ರಾಷ್ಟ್ರೀಯ ವಾರ್ತೆಗಳು**

<u>ಮುಖ್ಯಾಂಶಗಳು</u>

1. ನವದೆಹಲಿಯಲ್ಲಿ ನಾಳೆ ರೈಸಿನಾ ಸಂವಾದ 2025 ಅನ್ನು ಉದ್ಘಾಟಿಸಲಿರುವ ಪ್ರಧಾನಿ ನರೇಂದ್ರ ಮೋದಿ
2. ಪ್ರಸಾರ ಭಾರತಿಗೆ 'ಅಮೂಲ್ಯ ಕೊಡುಗೆಗಾಗಿ ಹಾಕಿ ಇಂಡಿಯಾ ಜಮನ್‌ಲಾಲ್ ಶರ್ಮಾ ಪ್ರಶಸ್ತಿ' ಪ್ರದಾನ
3. ಇದೇ 19 ರಿಂದ ಭಯೋತ್ಪಾದನೆ ನಿಗ್ರಹ ಕುರಿತಾದ 14ನೇ ಆಸಿಯಾನ್ ಎಡಿಎಮ್‌ಎಮ್ –ಪ್ಲಸ್ ತಜ್ಞರ ಕಾರ್ಯಾಕಾರಿ ಗುಂಪಿನ ಸಭೆ
4. ಹಿರಿಯರ ಏಷ್ಯನ್ ಚಾಂಪಿಯನ್‌ಶಿಪ್ ಕುಸ್ತಿ ಪಂದ್ಯಾವಳಿಗಾಗಿ 30 ಕುಸ್ತಿಪಟುಗಳ ತಂಡ ಆಯ್ಕೆ

****************

ನವದೆಹಲಿಯಲ್ಲಿ ನಾಳೆ ನಡೆಯಲಿರುವ ರೈಸಿನಾ ಸಂವಾದ 2025 ಕಾರ್ಯಕ್ರಮವನ್ನು ಪ್ರಧಾನಿ ನರೇಂದ್ರ ಮೋದಿ ಉದ್ಘಾಟಿಸಲಿದ್ದಾರೆ. ಈ ಸಂದರ್ಭದಲ್ಲಿ ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಉಪಸ್ಥಿತರಿರಲಿದ್ದಾರೆ.

ರೈಸಿನಾ ಸಂವಾದದ 10ನೇ ಆವೃತ್ತಿ ಇದಾಗಿದ್ದು, ನಾಳೆಯಿಂದ ಮಾರ್ಚ್ 19 ರವರೆಗೆ ನಡೆಯಲಿದೆ.

ರೈಸಿನಾ ಸಂವಾದ, ಜಾಗತಿಕ ಸಮುದಾಯ ಎದುರಿಸುತ್ತಿರುವ ಸವಾಲಿನ ಸಮಸ್ಯೆಗಳನ್ನು ಪರಿಹರಿಸಲು ಬದ್ಧವಾಗಿರುವ ಭೌಗೋಳಿಕ, ರಾಜಕೀಯ ಮತ್ತು ಭೂ ಅರ್ಥಶಾಸ್ತ್ರದ ಕುರಿತಾದ ಭಾರತದ ಪ್ರಮುಖ ಸಮ್ಮೇಳನವಾಗಿದೆ.

ಪ್ರತಿ ವರ್ಷ, ರಾಜಕೀಯ, ವ್ಯವಹಾರ, ಮಾಧ್ಯಮ ಮತ್ತು ನಾಗರಿಕ ಸಮಾಜದ ನಾಯಕರು ನವದೆಹಲಿಯಲ್ಲಿ ಈ ವೇದಿಕೆಯಲ್ಲಿ ಒಟ್ಟುಗೂಡಿ ವಿಶ್ವದ ಸದ್ಯದ ಪರಿಸ್ಥಿತಿ ಹಾಗೂ ವಿವಿಧ ಸಮಕಾಲೀನ ವಿಷಯಗಳಲ್ಲಿ ಸಹಕಾರಕ್ಕಾಗಿ ಅವಕಾಶ ಅನ್ವೇಷಿಸುವ ಕುರಿತು ಚರ್ಚೆ ನಡೆಸುತ್ತಾರೆ.

ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಸಹಭಾಗಿತ್ವದಲ್ಲಿ ಅಬ್ಸರ್ವರ್ ಸಂಸೋಧನಾ ಪ್ರತಿಷ್ಠಾನ ಈ ಸಮ್ಮೇಳನವನ್ನು ಆಯೋಜಿಸುತ್ತದೆ.

****************

ನ್ಯೂಜಿಲೆಂಡ್ ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಐದು ದಿನಗಳ ಭಾರತ ಭೇಟಿಗಾಗಿ ಇಂದು ನವದೆಹಲಿಗೆ ಆಗಮಿಸಲಿದ್ದಾರೆ. ಅವರೊಂದಿಗೆ ಸಚಿವರು, ಹಿರಿಯ ಅಧಿಕಾರಿಗಳು, ಉದ್ಯಮಿಗಳು, ಮಾಧ್ಯಮ ಪ್ರತಿನಿಧಿಗಳು ಹಾಗೂ ಅನಿವಾಸಿ ಭಾರತೀಯ ಸಮುದಾಯದ ಸದಸ್ಯರನ್ನೊಳಗೊಂಡ ಉನ್ನತಮಟ್ಟದ ನಿಯೋಗ ಆಗಮಿಸಲಿದೆ.

ನ್ಯೂಜಿಲೆಂಡ್ ಪ್ರಧಾನಿ ನಾಳೆ, ಪ್ರಧಾನಮಂತ್ರಿ ನರೇಂದ್ರ ಮೋದಿ ಅವರೊಂದಿಗೆ ಭಾರತ–ನ್ಯೂಜಿಲೆಂಡ್ ನಡುವಿನ ಸಂಬಂಧಗಳ ಕುರಿತಂತೆ ಮಾತುಕತೆ ನಡೆಸಲಿದ್ದಾರೆ. ಇದರ ಜೊತೆಗೆ ಅವರು, ಹತ್ತನೇ ರೈಸಿನಾ ಸಂವಾದ 2025 ರ ಉದ್ಘಾಟನಾ ಅಧಿವೇಶನದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಪ್ರದಾನ ಭಾಷಣ ಮಾಡಲಿದ್ದಾರೆ.

ಪ್ರಧಾನಿ ಕ್ರಿಸ್ಟೋಫರ್ ಲುಕ್ಸಾನ್ ಅವರು, ರಾಷ್ಟ್ರಪತಿ ಭವನದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರನ್ನು ಭೇಟಿ ಮಾಡಲಿದ್ದಾರೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯ ತಿಳಿಸಿದೆ.

ತಮ್ಮ ಭೇಟಿಯ ಭಾಗವಾಗಿ ಅವರು, ಮುಂಬೈನಲ್ಲಿ ಉದ್ಯಮಿಗಳೊಂದಿಗೆ ಸಂವಾದ ನಡೆಸಲಿದ್ದಾರೆ.

****************

ನವದೆಹಲಿಯಲ್ಲಿ ನಿನ್ನೆ ನಡೆದ ಹಾಕಿ ಇಂಡಿಯಾ ಏಳನೇ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಪ್ರಸಾರ ಭಾರತಿಗೆ 'ಅತ್ಯಮುಲ್ಯ ಕೊಡುಗೆಗಾಗಿ ಹಾಕಿ ಇಂಡಿಯಾ ಜಮನ್‌ಲಾಲ್ ಶರ್ಮಾ ಪ್ರಶಸ್ತಿ' ನೀಡಿ ಗೌರವಿಸಲಾಗಿದೆ. ಈ ಪ್ರಶಸ್ತಿ ದೇಶಾದ್ಯಂತ ಹಾಕಿಯ ಪ್ರಚಾರ ಪ್ರಸಾರದಲ್ಲಿ ತೊಡಗಿ, ಆ ಕ್ರೀಡೆಯನ್ನು ಉತ್ತೇಜಿಸುವಲ್ಲಿ ಪ್ರಸಾರ ಭಾರತಿಯ ಪ್ರಯತ್ನಗಳನ್ನು ಗುರುತಿಸುತ್ತದೆ.

ಈ ಕುರಿತು ಒಂದು ವರದಿ

ಹಾಕಿ ಇಂಡಿಯಾ 7ನೇ ರಾಷ್ಟ್ರೀಯ ಪ್ರಶಸ್ತಿ ಪ್ರದಾನ ಸಮಾರಂಭ ಭಾರತೀಯ ಹಾಕಿ 100 ವರ್ಷ ಪೂರೈಸಿರುವ ಮತ್ತು 1975 ರಲ್ಲಿ ಭಾರತದ ವಿಶ್ವಕಪ್ ಜಯವನ್ನು ಸ್ಮರಿಸಿ, ಸಂಭ್ರಮಿಸುವ ಕ್ಷಣವಾಗಿತ್ತು.

ಸಮಾರಂಭದಲ್ಲಿ 1975 ರ ಪುರುಷರ ವಿಶ್ವಕಪ್ ವಿಜೇತ ತಂಡಕ್ಕೆ ಹಾಕಿ ಇಂಡಿಯಾ ಮೇಜರ್ ಧ್ಯಾನ್ ಚಂದ್ ಜೀವಮಾನ ಸಾಧನೆ ಪ್ರಶಸ್ತಿ ಹಾಗೂ 50 ಲಕ್ಷ ನಗದು ಬಹುಮಾನ ನೀಡಿ ಗೌರವಿಸಲಾಯಿತು.

ಇದೇ ವೇಳೆ ಭಾರತದ ಹಾಕಿ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಹಿರಿಯ ಗೋಲ್‌ಕೀಪರ್ ಸವಿತಾ ಪುನಿಯಾ ಹಾಕಿ ಇಂಡಿಯಾ ಪುರುಷ ಮತ್ತು ಮಹಿಳಾ ವಿಭಾಗಗಳಲ್ಲಿ ಹಾಕಿ ಇಂಡಿಯಾ ಬಲ್ಬೀರ್ ಸಿಂಗ್ ವರ್ಷದ ಹಿರಿಯ ಆಟಗಾರ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡರು.

ಇದೇ ವೇಳೆ ಹಾಕಿಯನ್ನು ಉತ್ತೇಜಿಸಿ 14ನೇ ಹಾಕಿ ರಾಷ್ಟ್ರೀಯ ಚಾಂಪಿಯನ್‌ಶಿಪ್‌ನಲ್ಲಿ ತೋರಿದ ಉತ್ತಮ ಪ್ರದರ್ಶನಕ್ಕಾಗಿ ಒಟ್ಟು 8 ರಾಜ್ಯಗಳನ್ನು ಗೌರವಿಸಲಾಯಿತು. ತಮಿಳುನಾಡು ಹಾಕಿ ಘಟಕಕ್ಕೆ ವರ್ಷದ ಅತ್ಯುತ್ತಮ ಸದಸ್ಯ ಘಟಕ ಪ್ರಶಸ್ತಿ ನೀಡಲಾಯಿತು.

****************

ಇದೇ 19 ಹಾಗೂ 20 ರಂದು ಎರಡುದಿನಗಳ ಕಾಲ ನವದೆಹಲಿಯಲ್ಲಿ ಭಯೋತ್ಪಾದನೆ ನಿಗ್ರಹ ಕುರಿತಂತೆ 14ನೇ ಆಸಿಯಾನ್ ರಕ್ಷಣಾ ಸಚಿವರ ಸಭೆ –ಎ.ಡಿ.ಎಮ್.ಎಮ್–ಪ್ಲಸ್ ತಜ್ಞರ ಕಾರ್ಯಕಾರಿ ಗುಂಪಿನ ಸಭೆ ನಡೆಯಲಿದೆ.

ಭಾರತ ಹಾಗೂ ಮಲೇಷಿಯಾ ಈ ಸಭೆಯ ಸಹ ಅಧ್ಯಕ್ಷತೆ ವಹಿಸಲಿವೆ. 2024 ರಿಂದ 2027ರ ಋತುವಿನಲ್ಲಿ ಭಯೋತ್ಪಾದನೆ ನಿಗ್ರಹಕ್ಕೆ ಯೋಜಿಸಲಾಗಿರುವ ಚಟುವಟಿಕೆಗಳ ಕುರಿತಾದ ಮೊದಲ ಸಭೆ ಇದಾಗಿದೆ.

ಈ ಸಭೆ ಆಸಿಯಾನ್ ರಾಷ್ಟ್ರಗಳ ಹಾಗೂ ಪಾಲುದಾರ ರಾಷ್ಟ್ರಗಳ ನಡುವೆ ಭಯೋತ್ಪಾದನಾ ನಿಗ್ರಹಕ್ಕೆ ಸಂಬಂಧಿಸಿದಂತೆ ರಕ್ಷಣಾ ಪಡೆಗಳ ಅನುಭವಗಳನ್ನು ಹಂಚಿಕೊಳ್ಳಲು ವೇದಿಕೆ ಒದಗಿಸುತ್ತದೆ.

ಬ್ರೂನೈ, ಕಾಂಬೋಡಿಯಾ, ಇಂಡೋನೇಷಿಯಾ, ಲಾವೊ ಪಿಡಿಆರ್, ಮಲೇಷಿಯಾ, ಮಯನ್ಮಾರ್, ಫಿಲಿಪ್ಪೈನ್ಸ್, ವಿಯಟ್ನಾಂ, ಸಿಂಗಾಪುರ್ ಮತ್ತು ಥೈಲ್ಯಾಂಡ್ ಸೇರಿದಂತೆ ಹತ್ತು ಆಸಿಯಾನ್ ರಾಷ್ಟ್ರಗಳು ಹಾಗೂ ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಕೊರಿಯಾ ಗಣರಾಜ್ಯ, ಜಪಾನ್, ಚೀನಾ, ಅಮೆರಿಕ ಮತ್ತು ರಷ್ಯಾದ 8 ಸಂವಾದ ಪಾಲುದಾರರು ಸೇರಿದಂತೆ ಟಿಮೊರ್‌ಲೆಸ್ಟೆ ಹಾಗೂ ಆಸಿಯಾನ್ ಕಾರ್ಯಾಲಯದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಲಿದ್ದಾರೆ.

ಭಾರತದ ರಕ್ಷಣಾ ಕಾರ್ಯದರ್ಶಿ ರಾಜೇಶ್ ಕುಮಾರ್ ಸಿಂಗ್, ಸಭೆಯ ಉದ್ಘಾಟನಾ ಸಮಾರಂಭದಲ್ಲಿ ಪ್ರಧಾನ ಭಾಷಣ ಮಾಡಲಿದ್ದಾರೆ.

****************

ಸ್ಪೇಸ್ ಎಕ್ಸ್‌ನ ಕ್ರೂ-10 ಯೋಜನೆ ಯಶಸ್ವಿಯಾಗಿ ಡಾಕಿಂಗ್ ಪ್ರಕ್ರಿಯೆ ನಡೆಸಿದ ನಂತರ ನಾಸಾ ಗಗನ ಯಾತ್ರಿಗಳಾದ ಹ್ಯಾನ್ ಮೆಕ್ಲೇನ್ ಮತ್ತು ನಿಕೋಲ್ ಎಯರ್ಸ್, ಜಪಾನ್‌ನ ಬಾಹ್ಯಾಕಾಶ ಪರಿಶೋಧನಾ ಸಂಸ್ಥೆ ಜಾಕ್ಸಾದ ಗಗನ ಯಾತ್ರಿ ಟಕುಯಾ ವನಿಶಿ ಅವರೊಂದಿಗೆ ಇಂದು ಬೆಳಗ್ಗೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣಕ್ಕೆ ತಲುಪಿದ್ದಾರೆ.

ಶುಕ್ರವಾರ ಟೆಕ್ಸಾಸ್‌ನಿಂದ ಉಡಾವಣೆಯಾದ ಡ್ರ್ಯಾಗನ್ ಬಾಹ್ಯಾಕಾಶ ನೌಕೆ ಭಾರತೀಯ ಕಾಲಮಾನ ಬೆಳಗ್ಗೆ 9.35 ಕ್ಕೆ ಅಂತಾರಾಷ್ಟ್ರೀಯ ಬಾಹ್ಯಾಕಾಶ ನಿಲ್ದಾಣ ತಲುಪಿದೆ. ಇದರಿಂದ 9 ತಿಂಗಳಿನಿಂದ ಕಕ್ಷೆಯಲ್ಲಿ ಸಿಲುಕಿರುವ ಭಾರತ ಮೂಲದ ಸುನಿತಾ ವಿಲಿಯಮ್ಸ್ ಹಾಗೂ ಬುಚ್ ವಿಲ್ಮೋರ್ ಅವರನ್ನು ಕರೆ ತರುವ ಸಂಬಂಧ ಹೊಸ ಭರವಸೆ ಮೂಡಿದೆ.

****************

ನವದೆಹಲಿಯ ಜೆಎಲ್‌ಎನ್ ಕ್ರೀಡಾಂಗಣದಲ್ಲಿ ಇಂದು 'ಫಿಟ್ ಇಂಡಿಯಾ ಕಾರ್ನಿವಲ್' ಅನ್ನು ಕೇಂದ್ರ ಯುವ ವ್ಯವಹಾರ ಮತ್ತು ಕ್ರೀಡಾ ಸಚಿವ ಡಾ.ಮನ್ಸುಖ್ ಮಾಂಡವಿಯಾ ಉದ್ಘಾಟಿಸಲಿದ್ದಾರೆ.

ಮೂರು ದಿನಗಳ ಈ ಫಿಟ್‌ನೆಸ್ ಮತ್ತು ವೆಲ್‌ನೆಸ್ ಉತ್ಸವ, ಆರೋಗ್ಯಕರ ಮತ್ತು ಸಕ್ರಿಯ ಜೀವನಶೈಲಿಯನ್ನು ಉತ್ತೇಜಿಸುವ ಗುರಿಯನ್ನು ಹೊಂದಿದೆ. ಇದು ಫಿಟ್ ಇಂಡಿಯಾ ಆಂದೋಲನದ ಆರೋಗ್ಯಕರ ಮತ್ತು ಬೊಜ್ಜು ಮುಕ್ತ ರಾಷ್ಟ್ರದ ದೃಷ್ಟಿಕೋನದೊಂದಿಗೆ ಹೊಂದಿಕೆಯಾಗುತ್ತದೆ. ಇದು ಹಗ್ಗದ ಸ್ಕಿಪ್ಪಿಂಗ್, ಸ್ಟೇಷನರಿ ಸೈಕ್ಲಿಂಗ್, ಆರ್ಮ್ ವ್ರೆಸ್ಲಿಂಗ್, ಕ್ರಿಕೆಟ್ ಬೌಲಿಂಗ್ ಸೇರಿದಂತೆ ಹಲವಾರು ಕ್ರೀಡಾ ಚಟುವಟಿಕೆಗಳನ್ನು ಒಳಗೊಂಡಿರಲಿದೆ.

ಉದ್ಘಾಟನಾ ಸಮಾರಂಭದಲ್ಲಿ ಯುವ ವ್ಯವಹಾರ ಮತ್ತು ಕ್ರೀಡಾ ರಾಜ್ಯ ಸಚಿವೆ ರಕ್ಷಾ ಖಡ್ಸೆ ಮತ್ತು ಬಾಲಿವುಡ್ ನಟ ಆಯುಷ್ಮಾನ್ ಖುರಾನಾ ಭಾಗವಹಿಸಲಿದ್ದಾರೆ.

ಈ ಕಾರ್ಯಕ್ರಮದ ಸಂದರ್ಭದಲ್ಲಿ, ಮುಂಬರುವ ಖೇಲೋ ಇಂಡಿಯಾ ಪ್ಯಾರಾ ಕ್ರೀಡಾಕೂಟದ ಲೋಗೋ ಮತ್ತು ಗೀತೆಯನ್ನು ಸಹ ಅನಾವರಣಗೊಳಿಸಲಾಗುವುದು. ಖೇಲೋ ಇಂಡಿಯಾ ಪ್ಯಾರಾ ಕ್ರೀಡಾಕೂಟ ಈ ತಿಂಗಳ 20 ರಂದು ರಾಷ್ಟ್ರ ರಾಜಧಾನಿಯಲ್ಲಿ ಪ್ರಾರಂಭವಾಗಲಿದೆ.

****************

ಒಡಿಯಾ ಸಾಹಿತ್ಯ ಲೋಕದ ಖ್ಯಾತ ಆಧುನಿಕ ಕವಿ ಪದ್ಮಭೂಷಣ ಪುರಸ್ಕೃತ ರಮಾಕಾಂತ್ ರಥ್ ಇಂದು ಮುಂಜಾನೆ ಭುವನೇಶ್ವರದಲ್ಲಿ ನಿಧನರಾಗಿದ್ದಾರೆ. ಅವರಿಗೆ 91 ವರ್ಷ ವಯಸ್ಸಾಗಿತ್ತು.

1957ರ ಬ್ಯಾಚ್‌ನ ಐಎಎಸ್ ಅಧಿಕಾರಿಯಾಗಿರುವ ಒಡಿಶಾ ಮುಖ್ಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದು, ಕೇಂದ್ರ ಸರ್ಕಾರದಲ್ಲಿ ಹಲವು ಪ್ರಮುಖ ಹುದ್ದೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ.

ಒಳಾರ್ಥ ಹಾಗೂ ವಿಭಿನ್ನತೆಗಾಗಿ ಅವರ ಶ್ರೀ ರಾಧ ಸೇರಿದಂತೆ ಹಲವು ಕವಿತೆಗಳು ಖ್ಯಾತಿ ಪಡೆದಿವೆ. 1998 ರಿಂದ 2003 ರವರೆಗೆ ಭಾರತೀಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಕಾರ್ಯ ನಿರ್ವಹಿಸಿರುವ ಅವರಿಗೆ ಅವರ ಸಾಹಿತ್ಯ ಕೊಡುಗೆಯನ್ನು ಗುರುತಿಸಿ 2006 ರಲ್ಲಿ ಭಾರತದ ಅತ್ಯುನ್ನತ ನಾಗರಿಕ ಪ್ರಶಸ್ತಿಗಳಲ್ಲಿ ಒಂದಾದ ಪದ್ಮಭೂಷಣ ನೀಡಿ ಗೌರವಿಸಲಾಗಿದೆ.

ರಮಾಕಾಂತ್ ರಥ್ ಅವರ ನಿಧನಕ್ಕೆ ಒಡಿಶಾ ಮುಖ್ಯಮಂತ್ರಿ ಮೋಹನ್ ಚರಣ್ ಮಾಂಝಿ ಸೇರಿದಂತೆ ಹಲವು ಗಣ್ಯರು ಸಂತಾಪ ಸೂಚಿಸಿದ್ದಾರೆ.

***************

ಇದೇ 25 ರಿಂದ 30ರವರೆಗೆ ಜಾರ್ಡನ್‌ನ ಅಮ್ಮನ್‌ನಲ್ಲಿ ನಡೆಯಲಿರುವ ಹಿರಿಯರ ಏಷ್ಯನ್ ಚಾಂಪಿಯನ್‌ಶಿಪ್ ಕುಸ್ತಿ ಪಂದ್ಯಾವಳಿಗಾಗಿ ಭಾರತೀಯ ಕುಸ್ತಿ ಒಕ್ಕೂಟ, ವಿಶ್ವ ಚಾಂಪಿಯನ್‌ಶಿಪ್ ಪದಕ ವಿಜೇತ ದೀಪಕ್ ಪುನಿಯಾ ಹಾಗೂ ಅಂತಿಮ್ ಪಾಂಘಲ್ ಸೇರಿದಂತೆ 30 ಕುಸ್ತಿಪಟುಗಳನ್ನು ಆಯ್ಕೆ ಮಾಡಿದೆ.

ಪುರುಷರ ಫ್ರೀ ಸ್ಟೈಲ್ ಮತ್ತು ಗ್ರೆಕೊ ರೋಮನ್ ಹಾಗೂ ಮಹಿಳೆಯರ ವಿಭಾಗಗಳಿಗೆ ತಲಾ ಹತ್ತು ಕುಸ್ತಿಪಟುಗಳನ್ನು ಅರ್ಹತಾ ಸುತ್ತಿನ ಮೂಲಕ ಭಾರತೀಯ ಕುಸ್ತಿ ಒಕ್ಕೂಟ ಆಯ್ಕೆ ಮಾಡಿದೆ.

***************

2025ರ ಮಹಿಳಾ ಪ್ರೀಮಿಯರ್ ಲೀಗ್– ಡಬ್ಲ್ಯುಪಿಎಲ್ ಟಿ–20 ಪ್ರಶಸ್ತಿಯನ್ನು ಮುಂಬೈ ಇಂಡಿಯನ್ಸ್ ತನ್ನದಾಗಿಸಿಕೊಂಡಿದೆ.

ಮುಂಬೈನ ಬ್ರಬಾರ್ನ್ ಕ್ರೀಡಾಂಗಣದಲ್ಲಿ ಕಳೆದ ರಾತ್ರಿ ನಡೆದ ಮಹಿಳಾ ಪ್ರೀಮಿಯರ್ ಲೀಗ್– ಡಬ್ಲ್ಯುಪಿಎಲ್ ಟಿ–20 ಕ್ರಿಕೆಟ್ ಪಂದ್ಯಾವಳಿಯ ಫೈನಲ್ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಮುಂಬೈ ಇಂಡಿಯನ್ಸ್ ತಂಡ 8 ರನ್‌ಗಳ ಜಯ ದಾಖಲಿಸಿ ಎರಡನೇ ಬಾರಿಗೆ ಡಬ್ಲ್ಯುಪಿಎಲ್ ಕಿರೀಟವನ್ನು ಮುಡಿಗೇರಿಸಿಕೊಂಡಿದೆ.

ಟೂರ್ನಿಯಲ್ಲಿ ಅತಿ ಹೆಚ್ಚು 523 ರನ್ ಗಳಿಸಿದ ನ್ಯಾಟ್ ಸೈವರ್ ಆರೆಂಜ್ ಕ್ಯಾಪ್, 18 ವಿಕೆಟ್ ಪಡೆದ ಅಮೇಲಿಯಾ ಕೇರ್ ಪರ್ಪಲ್ ಕ್ಯಾಪ್ ಹಾಗೂ ಅಮನ್ ಜೌತ್ ಕೌರ್ ಸರಣಿ ಉದ್ಯಯೋನ್ಮುಖ ಆಟಗಾರ ಪ್ರಶಸ್ತಿ ಪಡೆದರು.

********ಮುಕ್ತಾಯ********